# ಕೊಡಲಿ

ತಂದಳು ದೇವತೆ ಕೊಡಲಿಯನು
ಚಿನ್ನ ಬೆಳ್ಳಿ ಹಿಡಿಕೆಯನು
ಅಲ್ಲವೆ ಅಲ್ಲ ಇದು ಸತ್ಯ
ಕಬ್ಬಿಣ ಕೊಡಲಿ ನನದಿತ್ತು

ಹೇಳಿದಳೊಂದು ಸತ್ಯವನು
ಬಡತನ ಕಳೆವೆನು ಸಾಕೇನು
ವಚನವ ಕೊಡು ನನಗೊಂದು
ಚಿನ್ನದ ಕೊಡಲಿ ನಿನಗಿನ್ನು

ಗಿಡ ಮರ ಕಡಿವುದು ಬಿಡಬೇಕು
ಚಿನ್ನದ ಕೊಡಲಿಯ ತೊಗೊಬೇಕು
ಹಸಿರೇ ಉಸಿರಿಗೆ ಆಧಾರ
ತಪ್ಪಿದರಿಲ್ಲ ಉಳಿಗಾಲ

ಪಡೆದನು ಚಿನ್ನದ ಕೊಡಲಿಯನು
ಬಿಟ್ಟನು ಮರವನು ಕಡಿವುದನು
ಹಣ್ಣುಹಂಪಲ ಗಿಡ ಬೆಳೆಸಿದನು
ಹಸಿರಿಗೆ ಹೆಸರು ಗಳಿಸಿದನು

**-ಲಲಿತಾ ಕೆ. ಹೊಸಪ್ಯಾಟಿ**





# ಹಿಡಿದ ಹಟ

ನೆಪೋಲಿಯನ್ ಬಾಲಕನಾಗಿದ್ದಾಗ ಒಂದು ದಿನ ಬೆಳಿಗ್ಗೆ ಎದ್ದವನೇ ಎತ್ತಲೋ ಹೋದವನು ಮಧ್ಯಾಹ್ನ ಊಟದ ಸಮಯವಾದರೂ ಮನೆಗೆ ಬರಲಿಲ್ಲ. ಅವನಿಗಾಗಿ ಕಾದು ಕುಳಿತ ತಾಯಿಗೆ ಕಳವಳದಲ್ಲಿ ಹಸಿವು ಮರೆತು ಹೋಯಿತು. ಯಾವ ತಾಯಿ ತಾನೆ ತನ್ನ ಮಗನಿಗೆ ಉಣಬಡಿಸದೆ ಸಮಾಧಾನವಾಗಿದ್ದಾಳು? ಸಾಯಂಕಾಲವಾದರೂ ಅವನು ಬರಲಿಲ್ಲ.

ಅವಳಿಗೆ ತನ್ನ ಮಗನ ವಿಚಾರದಲ್ಲಿ ಭಯ ಹುಟ್ಟಿತು. ಅಷ್ಟರಲ್ಲಿ ಬಾಗಿಲ ಬಳಿ ಏನೋ ಸದ್ದು ಆದಾಗ ಅವಳು ಕತ್ತೆತ್ತಿ ನೋಡಿದರೆ ಒಂದು ಕೈಯಲ್ಲಿ ನೋಟು ಪುಸ್ತಕ, ಇನ್ನೊಂದು ಕೈಯಲ್ಲಿ ಪೆನ್ಸಿಲ್ ಹಿಡಿದು ನೆಪೋಲಿಯನ್ ನಿಂತಿದ್ದ. ತಟಕ್ಕನೆ ಅವಳ ಕಳವಳವೆಲ್ಲ ಮಾಯವಾಗಿ ಕೋಪ ಉಕ್ಕಿ, ಹಿಂದೆ– ಮುಂದೆ ನೋಡದೆ ಅವನ ಕೆನ್ನೆಗೆ ಬಾರಿಸಿದಳು. ಹೊಡೆದೊಡನೆ ಅವಳ ಕೋಪ ದುಃಖಕ್ಕೆ ತಿರುಗಿತು. 'ಮಗೂ, ನಾನು ಇದುವರೆಗೆ ನಿನ್ನನ್ನು ಬುದ್ಧಿವಂತನೆಂದು ಭಾವಿಸಿದ್ದೆ. ಹೀಗೆ ಅನ್ನ ತಿನ್ನದೆ, ಯಾರ ಬೆದರಿಕೆಯೂ ಇಲ್ಲದೆ ಅಲೆಯುತ್ತೀಯೆಂದು ಎಣಿಸಿರಲಿಲ್ಲ' ಎಂದಳು.

ನೆಪೋಲಿಯನ್ ತಾಯಿಗೆ ಎದುರಾಡಲಿಲ್ಲ. ಏಟಿನ ನೋವಿಗೆ ಅಳಲೂ ಇಲ್ಲ. ಒಮ್ಮೆ ನೆಟ್ಟ ದೃಷ್ಟಿಯಿಂದ ತನ್ನ ತಾಯಿಯನ್ನು ನೋಡಿ ಕೆಲವು ಕ್ಷಣ ಮೌನವಾಗಿದ್ದು ಅನಂತರ ಹೇಳಿದ.

'ನಿಜ ತಿಳಿಯದೆ ನೀನು ನನ್ನ ಮೇಲೆ ಕೋಪಗೊಂಡಿರುವುದನ್ನು ಕಂಡು ನನಗೆ ಬಹಳ ದುಃಖವಾಗುತ್ತಿದೆ. ಆದರೆ ನಿನಗೆ ದಿನಕ್ಕೆ ಸಮುದ್ರದ ಅಲೆ ಎಷ್ಟು ಬಾರಿ ತೀರಕ್ಕೆ ಅಪ್ಪಳಿಸುತ್ತವೆ ಎಂಬುದು ಗೊತ್ತೋ?' ಎಂದು ಕೇಳಿದ ಉತ್ಸಾಹದಲ್ಲಿ ಅವಳು ಹೊಡೆದಿದ್ದುದು ಅವನಿಗೆ ಸಂಪೂರ್ಣವಾಗಿ ಮರೆತು ಹೋಯಿತು.

ತನಗೆ ತಿಳಿದ ಮಟ್ಟಿಗೆ ಅದುವರೆಗೆ ಯಾರೂ ಸಮುದ್ರದ ಅಲೆ ಎಣಿಸುವ ಕೆಲಸಕ್ಕೆ ಕೈ ಹಚ್ಚಿದ್ದು ಸಹ ತಿಳಿಯದೆಂದು ತಾಯಿ ಹೇಳಿದಳು.

'ಅದೇ ಈ ದಿನ ನಾನು ಮಾಡಿದ ಕೆಲಸ. ಯಾರೂ ಇದುವರೆಗೆ ಮಾಡದ ಕೆಲಸ ಮಾಡಬೇಕೆಂದು ಬೆಳಗಿನಿಂದ ತೀರದಲ್ಲಿ ಕುಳಿತು ಅಲೆಗಳನ್ನು ಲೆಕ್ಕ ಮಾಡಿದೆ. ಅಲೆಗಳ ಸಂಖ್ಯೆಯನ್ನು ಈ ಪುಸ್ತಕದಲ್ಲಿ ಗುರುತು ಮಾಡಿಕೊಂಡಿದ್ದೇನೆ ನೋಡು' ಎಂದು ಹೇಳಿ ತನ್ನ ಕೈಯಲ್ಲಿದ್ದ ಪುಸ್ತಕವನ್ನು ತಾಯಿಗೆ ತೋರಿಸಿದನು.

ಅನಂತರ ಅವನು ಪುನಃ 'ಈ ವಿಷಯ ತಿಳಿದವರು ಯಾರೂ ನನ್ನ ಮೇಲೆ ಕೋಪಗೊಳ್ಳರು ಎಂಬ ವಿಶ್ವಾಸದಿಂದ ಇದುವರೆಗೂ ಹಸಿವಿನ ಪರಿವೆ ಇಲ್ಲದೆ ಕೆಲಸದಲ್ಲಿ ಮಗ್ನನಾಗಿದ್ದೆ. ನನ್ನ ತಪ್ಪು ಕ್ಷಮಿಸಮ್ಮಾ' ಎಂದ.

ಮಗನ ಮಾತು ಕೇಳಿ ಅವಳ ಮಾತೃ ಹೃದಯ ಹಿಗ್ಗಿತು. ಅವಳು ಮಗನನ್ನು ಅಪ್ಪಿಕೊಂಡಳು. ಅವಳ ಕಂಗಳಿಂದ ಆನಂದಾಶ್ರು ಹರಿಯಿತು. ಹಿಡಿದ ಕೆಲಸ ಬಿಡದೆ ಮುಗಿಸುವ ಯೋಗ್ಯ ಮಗನನ್ನು ಹೊಡೆದುದಕ್ಕೆ ಅವಳ ಮನ ಬಹಳ ನೊಂದಿತು.

ನೆಪೋಲಿಯನ್ ಮುಂದೆ ಫ್ರಾನ್ಸಿನ ಚಕ್ರವರ್ತಿಯಾದ. ಹಿಡಿದ ಕೆಲಸವನ್ನು ಅಳುಕದೇ ಮುಗಿಸುವ ಸ್ವಭಾವ ಹನ್ನೆರಡು ವರ್ಷದ ಬಾಲಕನಿಗೆ ಅಸಾಧಾರಣವಾದುದಲ್ಲವೇ?

**(ಸಂಗ್ರಹ): ಶಿವರಾಮ ಭಟ್, ಹತ್ತೊಕ್ಕಲು**